ಇತರ ಮತಗಳಂತೆ ದ್ವೈತವೇದಾಂತವೂ ಸಾಧನಾಮಾರ್ಗದಲ್ಲಿ **ಶ್ರವಣ, ಮನನ, ನಿದಿಧ್ಯಾಸನ**ಗಳ ಆವಶ್ಯಕತೆಯನ್ನು ಒಪ್ಪುತ್ತದೆ. **ಶ್ರವಣ**ವೆಂದರೆ ಬ್ರಹ್ಮನಿಷ್ಠರಾದ ಗುರುಗಳಲ್ಲಿ ವೇದಾಧ್ಯಯನವನ್ನು ಮಾಡುತ್ತ, ಅವರಿಂದ ಬ್ರಹ್ಮಜ್ಞಾನವನ್ನು (ಬ್ರಹ್ಮದ ಮೇಲೆ ಆತ್ಮವು ಸರ್ವಥಾ ಅವಲಂಬಿಸಿದೆ ಎಂಬ ಜ್ಞಾನ) ಕುರಿತ ವೈದಿಕ ಸತ್ಯವನ್ನು ಶ್ರವಣ ಮಾಡುವುದು. **ಮನನ**ವೆಂದರೆ, ಗುರುಮುಖೇನ ಕೇಳಿದ ವಿಷಯಗಳನ್ನು ಅರಿತುಕೊಂಡು, ಆತ್ಮ ಬ್ರಹ್ಮಗಳನ್ನು ಕುರಿತು ನಿಶ್ಚಿತವಾದ ಬೌದ್ಧಿಕ ಜ್ಞಾನವನ್ನು ಪಡೆಯುವುದು. **ನಿದಿಧ್ಯಾಸನ**ವೆಂದರೆ, ಬೌದ್ಧಿಕವಾಗಿ ಅರ್ಥಮಾಡಿಕೊಂಡ ತತ್ತ್ವಗಳನ್ನು ಕುರಿತು ಧ್ಯಾನವನ್ನು ಮಾಡಿ ಅನುಭವಕ್ಕೆ ತಂದುಕೊಳ್ಳುವುದು ಮತ್ತು ಅವುಗಳನ್ನು ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ತರುವುದು.

ನಿದಿಧ್ಯಾಸನವು ಕೆಳಗಿನ ಅಂಶಗಳ ಮೇಲೆ ಆಧಾರಿತವಾಗಿರುತ್ತದೆ: ೧. **ಯಮ:** ಇದು ಕಾರ್ಯ, ಆಲೋಚನೆ, ಮಾತುಗಳಲ್ಲಿ ಅಹಿಂಸೆ, ಸತ್ಯ, ಅಸ್ತೇಯ (ಕದಿಯದಿರುವುದು), ಬ್ರಹ್ಮಚರ್ಯ, ಅಪರಿಗ್ರಹ(ಐಹಿಕ ವಿಷಯಗಳಲ್ಲಿನ ವೈರಾಗ್ಯ) – ಇವುಗಳನ್ನು ಒಳಗೊಂಡಿರುತ್ತದೆ. ೨. **ನಿಯಮ:** ಇದು ಶೌಚ, ತಪಸ್ಸು, ತುಷ್ಟಿ (ತೃಪ್ತಿ), ಸ್ವಾಧ್ಯಾಯ ಮತ್ತು ಹರಿಪೂಜನ (ದೇವರ ಪೂಜೆ) ಇವುಗಳನ್ನು ಒಳಗೊಂಡಿರುತ್ತದೆ.

ಎಲ್ಲಕ್ಕಿಂತ ಮುಖ್ಯವಾದುದು ಭಕ್ತಿಯ ಗಳಿಕೆ. ಭಗವಂತನ ಸರ್ವೋತ್ಕೃಷ್ಟತೆಯನ್ನು ಅರಿತು, ಉತ್ಕೃಷ್ಟವಾದ ರೀತಿಯಲ್ಲಿ ಆತನಲ್ಲಿ ಭಕ್ತಿಯನ್ನು ಬೆಳೆಸಿಕೊಳ್ಳಬೇಕು. ಇಲ್ಲದಿದ್ದರೆ ಮೋಕ್ಷವು ದುರ್ಲಭ. ಪ್ರಕ್ತೆಯ ಜ್ಞಾನ ಮತ್ತು ಭಕ್ತಿಗಳು ಪರಿಪೂರ್ಣಗೊಂಡಾಗ ಭಗವಂತನು ಅವನ ಮೇಲೆ ದಯೆತೋರಿ, ಮೋಕ್ಷವನ್ನು ಕರುಣಿಸುತ್ತಾನೆ. ಭಗವಂತನ ಅನುಗ್ರಹವಿಲ್ಲದೆ, ಮೋಕ್ಷವು ಸಾಧ್ಯವಿಲ್ಲ. ಆದರೆ ಕರುಣಾಮಯಿಯಾದ ಭಗವಂತನು ತನ್ನ ಸಾನ್ನಿಧ್ಯಕ್ಕಾಗಿ ಹಾತೊರೆಯುವ ಸಾಧಕನನ್ನು ಎಂದಿಗೂ ಕೈಬಿಡುವುದಿಲ್ಲ. ಅದಕ್ಕಾಗಿ ಸಾಧಕನು ನಿರಹಂಕಾರ ಮತ್ತು ಶರಣಾಗತಿಗಳಿಂದ ಭಗವಂತನನ್ನು ಸಂತೋಷಗೊಳಿಸಲು ಯತ್ನಿಸಬೇಕು.

ಶ್ರೀಮಧ್ವಾಚಾರ್ಯರು 'ತತ್ತ್ವವಿವೇಕ' ಎನ್ನುವ ತಮ್ಮ ಗ್ರಂಥದಲ್ಲಿ ಜೀವರುಗಳು ಮುಕ್ತರಾಗುವುದಕ್ಕೆ ಅಗತ್ಯವಾದ **ವಿವೇಕ**ವನ್ನು ತಿಳಿಸಿದ್ದಾರೆ. ಸಂಸಾರದಲ್ಲಿ ಸಿಕ್ಕಿರುವ ಜೀವನು ತಾನು ಸಂಪೂರ್ಣವಾಗಿ ಶ್ರೀಹರಿಗೆ ಅಧೀನನು ಎಂದು ಅರಿತುಕೊಳ್ಳುವುದೇ **ವಿವೇಕ**. ವಿವೇಕ ಪಡೆದವನು ಮುಕ್ತನಾಗುತ್ತಾನೆ. ಅದಕ್ಕಾಗಿ ಅವನು ಬೇರೆ ಯಾವ ಫಲವನ್ನೂ ನಿರೀಕ್ಷಿಸದೆ, ಶ್ರೀಹರಿಯ ಪ್ರೀತಿಗಾಗಿಯೇ ಎಲ್ಲ ಕರ್ಮಗಳನ್ನೂ ಮಾಡಬೇಕು.

ಧ್ಯಾನವು ಕೂಡ ಜ್ಞಾನಕ್ಕೆ ಅಗತ್ಯವಾದ ಸಾಧನ. ಸತತವಾಗಿ ಶ್ರೀಹರಿಯ ಮಹಿಮೆಯನ್ನು ಏಕಾಗ್ರತೆಯಿಂದ ಚಿಂತಿಸುವುದೇ **ಧ್ಯಾನ**. ಶ್ರೀಹರಿಯ ಕೃಪೆಯಿಂದ ಜ್ಞಾನ ಲಭಿಸುತ್ತದೆ. ಅದು ಸೂರ್ಯನಂತೆ ಸ್ಥಿರವಾದ ಜ್ಞಾನ. ಅದು ಮುಕ್ತಿಯನ್ನು ತಂದುಕೊಡುತ್ತದೆ. ಭಗವಂತನ ಲೋಕವಾದ ವೈಕುಂಠವನ್ನು ಸೇರಿ, ಅವನ ಸಾಮೀಪ್ಯವನ್ನು ಗಳಿಸುವುದೇ ಮುಕ್ತಿ. ಇದಕ್ಕಾಗಿಯೇ ಜೀವಿಯು ಪ್ರಯತ್ನಮಾಡಬೇಕು.

**(ಆಧಾರ: ವೇದಾಂತ ಪರಿಚಯ; ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ.)**

## ವಿನೋದದಿಂದ

### ವೇದಾಂತ

**ಚಿಕ್ಕ** ಹುಡುಗ, ಕತ್ತಲೆಗೆ ಹೆದರಿಕೊಳ್ಳುತ್ತಿದ್ದ. ಒಂದು ರಾತ್ರಿ ಅವನ ಅಮ್ಮ ಹೇಳಿದಳು, "ಹಿತ್ತಲಿಗೆ ಹೋಗಿ, ಕಸಬರಿಕೆ ತೆಗೆದುಕೊಂಡು ಬಾ." ಚಿಕ್ಕ ಹುಡುಗ ಅಮ್ಮನಿಗೆ ಹೇಳಿದ, "ಅಮ್ಮಾ, ನಾನು ಅಲ್ಲಿಗೆ ಹೋಗುವುದಿಲ್ಲ. ಕತ್ತಲಾಗಿದೆ, ನನಗೆ ಹೆದರಿಕೆ." ಅಮ್ಮ ನಕ್ಕಳು. "ನೀನು ಕತ್ತಲಿಗೆ ಹೆದರಬೇಕಾದಿಲ್ಲ. ಕೃಷ್ಣ ಅಲ್ಲಿ ಇರುತ್ತಾನೆ. ಅವನು ನಿನ್ನನ್ನು ನೋಡಿಕೊಳ್ಳುತ್ತಾನೆ. ನಿನ್ನನ್ನು ರಕ್ಷಿಸುತ್ತಾನೆ." ಚಿಕ್ಕ ಹುಡುಗ ಅಮ್ಮನನ್ನು ದಿಟ್ಟಿಸಿ ನೋಡಿದ, "ನಿಜವಾಗಲೂ ಕೃಷ್ಣ ಅಲ್ಲಿ ಇರುತ್ತಾನೇನು?" ಎಂದು ಕೇಳಿದ. ಅಮ್ಮ ಹೇಳಿದಳು, "ಖಂಡಿತ ಮಗು, ಅವನು ಎಲ್ಲೆಲ್ಲಿಯೂ ಇರುತ್ತಾನೆ. ಅವನು ನಿನಗೆ ಸಹಾಯ ಮಾಡುತ್ತಾನೆ." ಚಿಕ್ಕ ಹುಡುಗ ಒಂದು ನಿಮಿಷ ಮೌನವಾಗಿದ್ದು ಯೋಚಿಸಿದ. ಕತ್ತಲಲ್ಲಿ ಕತ್ತು ಚಾಗಿಸಿ ಇಣುಕಿ ನೋಡುತ್ತ ಕೂಗಿ ಹೇಳಿದ, "ಏ ಕೃಷ್ಣಾ, ಎಲ್ಲಿದ್ದೀಯೆ, ಸ್ವಲ್ಪ ಅಲ್ಲಿರುವ ಕಸಬರಿಕೆ ತೆಗೆದುಕೊಂಡು ಬರುತ್ತೀಯಾ?" **ನಾವೂ ಈ ಹುಡುಗನ ಹಾಗೆಯೇ ವರ್ತಿಸುತ್ತೇವೆ. ದೇವರನ್ನು ಸಂಪೂರ್ಣವಾಗಿ ನಂಬುವುದಿಲ್ಲ. ಅಲ್ಪಸ್ವಲ್ಪ ನಂಬಿದರೂ ದೇವರು ನಮಗೆ ಬೇಕಾಗಿ ಬರುವುದು ಲೌಕಿಕ ಕಾರ್ಯಗಳಲ್ಲಿ ಸಹಾಯಕ್ಕಾಗಿಯೇ. ಅವುಗಳಲ್ಲಿ ಯಶಸ್ಸು ಕಾಣದಿದ್ದರೆ ನಾವು ದೂರುವುದು ಅವನನ್ನೇ.**

**ತ**ನ್ನ ತಾಯಿ ಮತ್ತು ಅಕ್ಕನ ಜೊತೆಗೆ ಪಾಪು ಡಾಕ್ಟರರ ಶಾಪಿಗೆ ಹೋಗಿದ್ದ. ಡಾಕ್ಟರಿಗಾಗಿ ಕಾಯುತ್ತ ಕುಳಿತಿದ್ದ ಅಮ್ಮ, ಹಾಗೇ ತೂಕಡಿಸಲಾರಂಭಿಸಿದಳು. ಪಾಪುವಿಗೆ ಗಾಬರಿಯೋ ಗಾಬರಿ. ಎದ್ದು ಹೋಗಿ, ಅಮ್ಮನನ್ನು ಬಡಿದೆಬ್ಬಿಸಿ ಹೀಗೆ ಹೇಳಿದ: "ಅಮ್ಮಾ, ಇದು ಹರಿಕಥೆ ನಡೆಯುವ ದೇವಸ್ಥಾನವಲ್ಲ." **ಪುರಾಣ ಪುಣ್ಯಕಥೆ ಕೇಳಬೇಕೆಂಬ ಆಸೆ ಇರುವುದೇನೋ ನಿಜ, ಆದರೆ ಉದಾತ್ತ ವಿಚಾರಗಳು ತಲೆಗೆ ಹೋಗುವುದಿಲ್ಲ. ಆದ್ದರಿಂದ ನಿದ್ರೆ ಬರುವುದು ಸಹಜ. ಅದಕ್ಕಾಗಿಯೇ ಕಠೋಪನಿಷತ್ತು, ಆತ್ಮನ ಬಗ್ಗೆ ಹೇಳುವವರು ಸಿಕ್ಕರೂ ಕೇಳುವವರು ದುರ್ಲಭ ಎನ್ನುತ್ತದೆ.**

**ಅ**ಮೆರಿಕದಲ್ಲಿ ಮದುವೆ ನಡೆಯುತ್ತಿತ್ತು. ಒಂದು ಚಿಕ್ಕ ಹುಡುಗಿ ಅಮ್ಮನನ್ನು ಕೇಳಿದಳು: "ಅಮ್ಮಾ, ವಧು ಬಿಳಿ ಬಟ್ಟೆ ಧರಿಸಿರುವುದು ಯಾತಕ್ಕೆ?" ಮಗಳಿಗೆ ಸರಳವಾಗಿ ಉತ್ತರ ಕೊಡಬೇಕೆಂದು, ಅಮ್ಮ ಹೇಳಿದಳು, "ಬಿಳಿ ಸಂತೋಷದ ಬಣ್ಣ. ಇಂದು ಅವಳ ಜೀವನದಲ್ಲಿ ಅತ್ಯಂತ ಸಂತೋಷದ ದಿನ." ಹುಡುಗಿ ಸ್ವಲ್ಪ ಕಾಲ ಯೋಚಿಸಿ, ನಂತರ ಕೇಳಿದಳು: "ಹಾಗಾದರೆ, ವರನು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುವುದು ಯಾತಕ್ಕೆ? ಅದು ಅವನ ದುಃಖದ ದಿನವೇ?" **ನಾವು ಜಗತ್ತಿನ ಸಂಗತಿಗಳಿಗೆ ಹೀಗೆ ಸರಳ ಪರಿಹಾರವನ್ನು ನೀಡಲು ಹೋಗಿ, ಅನೇಕ ವೇಳೆ ಸಂದಿಗ್ಧಕ್ಕೆ ಒಳಗಾಗುತ್ತೇವೆ. ಜಗತ್ತಿನ ಮೂಲ ಅಜ್ಞಾನ, ಮಾಯೆ. ಮಾಯೆ ಅಂದರೆ ವಿರೋಧಾಭಾಸ, ಇಲ್ಲದಿರುವುದು ಕಾಣಿಸಿಕೊಳ್ಳುವುದು. ಆದ್ದರಿಂದ ಈ ಪ್ರಪಂಚ ಹೀಗೇ ಎಂದು ಹೇಳಲು ಸಾಧ್ಯವಿಲ್ಲ.**

**ಚಿಕ್ಕ** ಹುಡುಗಿ ಅಮ್ಮನನ್ನು ಕೇಳಿದಳು: "ನಾನು ಬಂದಿದ್ದು ಎಲ್ಲಿಂದ?" ತನ್ನ ಮಗು ಈಗಲೇ ವಿಜ್ಞಾನದಲ್ಲಿ ಆಸಕ್ತಿ ಬೆಳೆಸಿಕೊಳ್ಳುತ್ತಿದೆ ಎಂದು ಅಮ್ಮನಿಗೆ ತುಂಬ ಖುಷಿಯಾಯಿತು. ಅವಳು ತಕ್ಕ ಮಟ್ಟಿಗೆ ಡಾರ್ವಿನ್ನನ ಸಿದ್ಧಾಂತವನ್ನೆಲ್ಲ ಹೇಳಿ ಮುಗಿಸಿ, ಕೇಳಿದಳು, "ಈಗ ಗೊತ್ತಾಯ್ತಾ?" ಆಗ ಹುಡುಗಿ ಹೇಳಿದಳು, "ಆದರೆ ನನ್ನ ಸ್ನೇಹಿತೆ ಲೀಲಾ ಹೇಳಿದಳು, ನಾನು ಬಸವನಗುಡಿಯಿಂದ ಬಂದದ್ದು" ಅಂತ. ಈ ಮಾತು ಕೇಳಿ ಅಮ್ಮ ಬೇಸ್ತು ಬಿದ್ದಳು. **ವಿಪರೀತ ವಿಚಾರ, ಚರ್ಚೆಗಳೂ ಅಷ್ಟೆ. ಅವು ಸರಳ ವಿಚಾರವನ್ನು ಕಷ್ಟದವನ್ನಾಗಿ ಮಾಡುತ್ತವೆ. ಅವೆಲ್ಲ ಶಂಕರಾಚಾರ್ಯರು ಹೇಳಿದಂತೆ, "ಭುಕ್ತಯೇ ನ ತು ಮುಕ್ತಯೇ'– ಹಣಸಂಪಾದನೆಗೆ ಮಾತ್ರವಲ್ಲದೆ, ಭಗವಂತನನ್ನು ತಿಳಿದುಕೊಳ್ಳುವುದಕ್ಕಲ್ಲ.**